



**ದುರ್ಗದ ಬೇಡರ್ದಂಗೆ**
ಚಾರಿತ್ರಿಕ ಕಾದಂಬರಿ
ಲೇ: ಬಿ.ಎಲ್. ವೇಣು
ಪು: 316 ಬೆ: ₹ 300
ಪ್ರ: ಗೀತಾಂಜಲಿ ಪುಸ್ತಕ ಪ್ರಕಾಶನ
ಕಂದಾಯ ಭವನ, ನೂರು ಅಡಿ ರಸ್ತೆ,
ರಾಜೇಂದ್ರ ನಗರ,
ಶಿವಮೊಗ್ಗ – 577 201

ಅವರ ಸೃಜನಶೀಲ ಬರವಣಿಗೆಯಲ್ಲಿ ತೋರುವ ಸಮಕಾಲಿನ ಪ್ರಜ್ಞೆಯಾಗಿದೆ.

1857ರಲ್ಲಿ ನಡೆದ 'ಸಿಪಾಯಿ ದಂಗೆ'ಯೇ ಶ್ರೀಸಾಮಾನ್ಯರು ಬ್ರಿಟಿಷರ ವಿರುದ್ಧ ನಡೆಸಿದ ಮೊಟ್ಟ ಮೊದಲ ದಂಗೆ ಹಾಗೂ ಪ್ರಥಮ ಸ್ವಾತಂತ್ರ್ಯ ಹೋರಾಟವೆಂದು ಇತಿಹಾಸದಲ್ಲಿ ದಾಖಲೆಯಾಗಿಬಿಟ್ಟಿದೆ. ಆದರೆ, ಚಿತ್ರದುರ್ಗದಲ್ಲಿ, ಅದಕ್ಕೂ ಎಂಟು ವರ್ಷಗಳ ಮೊದಲೇ 1849ರಲ್ಲಿ ವಾಲ್ಮೀಕಿ, ನಿಶಾನಿ ರಾಮ, ರುದ್ರ, ಗಾದ್ರಿ, ಕೆಂಚ, ಮಂಜ ಮತ್ತು ವೀರಾನಾಯ್ಕರೆಂಬ ಚಿತ್ರದುರ್ಗ ಸುತ್ತಮುತ್ತಿನ ಏಳು ಮಂದಿ ಬೇಡ ಯುವಕರು ದೊಡ್ಡೇರಿ ಕಾಡಿನಲ್ಲಿ (ಚಳ್ಳಕೆರೆ ತಾಲ್ಲೂಕು) ಭೂಗತರಾಗಿದ್ದುಕೊಂಡು, ತಮ್ಮದೇ ದಂಡು ಕಟ್ಟಿ ಬ್ರಿಟಿಷರ ವಿರುದ್ಧ ಹೋರಾಡಿದ ಕಥನ ವೇಣು ಅವರ 'ದುರ್ಗದ ಬೇಡರ್ದಂಗೆ' ಕಾದಂಬರಿಯ ವಸ್ತು. ಸ್ವಾತಂತ್ರ್ಯ ಹೋರಾಟವು ಒಂದು ಸಾಮುದಾಯಿಕ ಹೋರಾಟವಾಗಿ ರೂಪುಗೊಳ್ಳದ, ರಾಷ್ಟ್ರೀಯ ಪ್ರಜ್ಞೆ ವೈಚಾರಿಕವಾಗಿ ಮತ್ತು ಭಾವನಾತ್ಮಕವಾಗಿ ಹರಳುಗಟ್ಟದ ಕಾಲದ ಕಥನ ಇದು. ಈ ಬಗೆಯ ಕಥನಗಳು ಭಾರತದುದ್ದಕ್ಕೂ ಕಂಡುಬರುತ್ತವೆ. ಹೀಗಾಗಿಯೇ ಚರಿತ್ರೆಕಾರರು ಪ್ರಾದೇಶಿಕ ಹಂತಗಳಲ್ಲಿ ನಡೆದ ಇಂತಹ ವಿಮೋಚನೆಯ ಹೋರಾಟಗಳನ್ನು 'ದಂಗೆ'ಗಳೆಂದೇ ಕರೆದಿದ್ದಾರೆ. ವೇಣು ಅವರು ಕೂಡ ಈ ವಿಮೋಚನೆಯ ಸಂಘರ್ಷವನ್ನು 'ದುರ್ಗದ ಬೇಡರ್ದಂಗೆ' ಎಂದೇ ಹೆಸರಿಸಿದ್ದಾರೆ. ಚರಿತ್ರೆಯ ಓದಿನಲ್ಲಿ ಸಿಕ್ಕ ಒಂದು ಸಣ್ಣ ಎಳೆಯನ್ನೇ ನೆಪವಾಗಿಟ್ಟುಕೊಂಡು ವೇಣು ಅವರು ಕಟ್ಟಿರುವ ಈ ಕಾದಂಬರಿಯು ಹಲವಾರು ಕಾರಣಗಳಿಂದಾಗಿ ಗಮನ ಸೆಳೆಯುತ್ತದೆ. ಕಳೆದುಹೋದ ಇತಿಹಾಸದ ಕೊಂಡಿಗಳನ್ನು ಹುಡುಕಿಕೊಂಡಿರುವ ಈ ಕೃತಿ ಸ್ಥಳೀಯ ಇತಿಹಾಸದ ಒಂದು ಮಜಲೂ ಆಗಬಹುದು. ಹಾಗೆಯೇ, ಅಂಚಿನಿಂದ ಆಚೆಗೆ ತಳ್ಳಲ್ಪಟ್ಟವರ ಇತಿಹಾಸದ ಕಥನವೂ ಆಗಬಹುದಾಗಿದೆ. ಹೀಗೆ ಇತಿಹಾಸದ ಕೊಂಡಿಗಳಿಗೆ ಸೇರದ ಇಂತಹ ಸಾವಿರಾರು ಘಟನೆಗಳು ಭಾರತದ ಇತಿಹಾಸದಿಂದ ದಾಖಲಾಗದೆ ಆಚೆಗೇ ಉಳಿದುಬಿಟ್ಟಿವೆ. ಮಣ್ಣಿನಲ್ಲಿ ಬೆರತಿರುವ ಇಂತಹ ಕಥನಗಳನ್ನು ಶೋಧಿಸಿ,